# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 619

ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 24-09-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ನೀರಾವರಿ ಪಂಪುಸೆಟ್ಟುಗಳಿಗೆ 1 ಹೆಚ್.ಪಿ. ಯಿಂದ 10 ಹೆಚ್.ಪಿ. ತನಕ ವಿದ್ಯುತ್ ಸಂಪರ್ಕ ನೀಡುವಾಗ ವಿಧಿಸುತ್ತಿರುವ ಅಭಿವೃದ್ಧಿ ಶುಲ್ಕವೆಷ್ಟು; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿನ ರೈತರ ಕೃಷಿ ನೀರಾವರಿ ಪಂಪುಸೆಟ್ಟುಗಳಿಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಎನ್ 41/ವಿಎಸ್‌ಸಿ2014/ಪಿ1 ದಿನಾಂಕ: 14.07.2014 & 23.07.2014 ರನ್ವಯ ದಿನಾಂಕ 31.07.2012ರ ನಂತರ ಅನಧಿಕೃತವಾಗಿ ಸೇರ್ಪಡೆಗೊಂಡು ನೋಂದಾಯಿಸಿರುವ ಮತ್ತು ಹೊಸದಾಗಿ ನೋಂದಾಯಿಸಲ್ಪಡುವ ಪಂಪ್‌ಸೆಟ್‌ಗಳಿಗೆ ಹೊಸ ಸಂಪರ್ಕ/ ಅನಧಿಕೃತ ಸಂಪರ್ಕವೆಂಬ ಭೇದವನ್ನು ತೆಗೆದುಹಾಕಿ ಒಟ್ಟಾರೆ ನೀರಾವರಿ ಪಂಪ್ ಸೆಟ್ಟುಗಳ ವಿದ್ಯುತ್ ಸಂಪರ್ಕಕ್ಕೆ ರೈತರು ರೂ.10,000/- ಶುಲ್ಕದ ಜೊತೆಗೆ ಠೇವಣಿ ಹಣವನ್ನು ಪಾವತಿಸಬೇಕಾಗಿರುತ್ತದೆ. ಈ ರೀತಿಯ ಹಣದ ಪಾವತಿಯು ಯಾವುದೇ ದಂಡನಾ ಶುಲ್ಕವಾಗಿರದೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಪಾವತಿಸುವ ಹಣವೆಂದು ಪರಿಗಣಿಸಲಾಗುವುದು.<br><br>ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿನ ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ನೀರಾವರಿ ಪಂಪುಸೆಟಗಳಿಗೆ 1 ಹೆಚ್.ಪಿ. ಯಿಂದ 10 ಹೆಚ್.ಪಿ.ವರೆಗೆ ವಿದ್ಯುತ್ ಸಂಪರ್ಕ ಪಡೆಯಲು ರೂ.10,000/- ಗಳನ್ನು ಮಾತ್ರ ಮೂಲಸೌಕರ್ಯ ರಚನಾ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. |
| ಆ) | ವಿಧಾನ ಪರಿಷತ್ತಿನ ಅರ್ಜಿ ಸಮಿತಿಯು ಅರ್ಜಿ ಸಂಖ್ಯೆ 88/2014 ರಲ್ಲಿ ಸಮಿತಿಯು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ನೀಡಲಾದ ಸೂಚನೆಯನ್ನು ಇಲಾಖೆಯಿಂದ ಜಾರಿಗೆ ತರಲಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು; | ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಮೂಲಸೌಕರ್ಯ ಕಲ್ಪಿಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸುಮಾರು ರೂ. 1.00 ಲಕ್ಷದಿಂದ ರೂ. 1.65 ಲಕ್ಷದವರೆಗೆ ವೆಚ್ಚವಾಗುತ್ತಿದೆ.<br><br>ನೀರಾವರಿ ಪಂಪ್ ಸೆಟ್ ಗಳ ಮೂಲಸೌಕರ್ಯ ರಚನೆಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಾಸ್ತವಿಕವಾಗಿ ತಗಲುವ ಸಂಪೂರ್ಣ ವೆಚ್ಚವನ್ನು ರೈತರಿಂದ ಭರಿಸಲು ಆರ್ಥಿಕವಾಗಿ ಸಂಕಷ್ಟವಾಗುವ ಅಂಶವನ್ನು ಪರಿಗಣಿಸಿ, ಕೇವಲ ರೂ. 10,000/- ಗಳನ್ನು ಮಾತ್ರ ಪಡೆಯಲಾಗುತ್ತಿದೆ. ಉಳಿದ ವೆಚ್ಚವನ್ನು ವಿದ್ಯುತ್ ಸರಬರಾಜು ಕಂಪನಿಗಳೇ ಭರಿಸುತ್ತಿವೆ. |

| | | |
|---|---|---|
| ಇ) | ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಂಡರೂ ಸಹ ಸಾಮಗ್ರಿಗಳನ್ನು ನೀಡದೇ ವರ್ಷಾನುಗಟ್ಟಲೇ ವಿದ್ಯುತ್ ಸಂಪರ್ಕವನ್ನು ನೀಡದಿರಲು ಕಾರಣವೇನು; ಇದರಿಂದ ರೈತರ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗಿ ಆರ್ಥಿಕ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿನ ರೈತರ ಕೃಷಿ ನೀರಾವರಿ ಪಂಪುಸೆಟ್ಟುಗಳಿಗೆ ಸರ್ಕಾರದ ಆದೇಶದಂತೆ ಹಣ ಪಾವತಿಸಿರುವ ರೈತರ ಜೇಷ್ಠತಾ ಪಟ್ಟಿ ತಯಾರಿಸಿ ಅದರಂತೆ ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ರೈತರ ಕೃಷಿ ನೀರಾವರಿ ಪಂಪ್ ಸೆಟ್‌ಗಳಿಗೆ. ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಮಾರ್ಗ ಹಾಗೂ ಅವಶ್ಯವಿರುವಲ್ಲಿ ಪರಿವರ್ತಕಗಳನ್ನು ಅಳವಡಿಸಲು ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಹಂತ ಹಂತವಾಗಿ ಗುತ್ತಿಗೆ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಂಡು ಮೂಲಭೂತ ಸೌಕರ್ಯವನ್ನು ಒದಗಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ.<br><br>ಮೂಲಭೂತ ಸೌಕರ್ಯ ರಚನೆಯ ಅಗತ್ಯತೆ ಇಲ್ಲದಿದ್ದಲ್ಲಿ ಸರ್ವೀಸ್ ಮೈನ್ಸ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಯಾವುದೇ ವಿಳಂಬ ವಿಲ್ಲದಂತೆ ನಿರ್ವಹಿಸಲು ಕಾಮಗಾರಿಗಳಿಗೆ ಟೆಂಡರ್ ನೀಡಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.<br><br>ದಿನಾಂಕ: 31.08.2020ರ ಅಂತ್ಯಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲಾದ ಹಾಗೂ ಬಾಕಿ ಇರುವ ಪಂಪ್ ಸೆಟ್‌ಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. |

**ಸಂಖ್ಯೆ:** ಎನರ್ಜಿ 184 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಮೋಹನ್ ಕುಮಾರ್ ಕೊಂಡಜ್ಜಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 619ಕ್ಕೆ ಅನುಬಂಧ:

ದಿನಾಂಕ: **31.08.2020**ರ ಅಂತ್ಯಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲಾದ ಹಾಗೂ ಬಾಕಿ ಇರುವ ಪಂಪ್ ಸೆಟ್‌ಗಳ ವಿವರಗಳು ಕೆಳಕಂಡಂತಿವೆ

| ಕ್ರ. ಸಂ. | ವಿದ್ಯುತ್ ಸರಬರಾಜು ಕಂಪನಿ ಹೆಸರು | ಸಕ್ರಮಗೊಳಿಸಲಾದ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ(ರೂ 50/- ನೋಂದಾಣಿ ಶುಲ್ಕ ಪಾವತಿಸಿದ) | ರೂ 10,000/- ಪಾವತಿಸಿರುವ ಒಟ್ಟು ನೀರಾವರಿ ಪಂಪು ಸೆಟ್ಟುಗಳ ಸಂಖ್ಯೆ | ರೂ 10,000/- ಪಾವತಿಸದೆ ಇರುವ ಒಟ್ಟು ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ | ಮೂಲಭೂತ ಸೌಲಭ್ಯ ಕಲ್ಪಿಸಿ ವಿದ್ಯುತ್ ಸಂಪರ್ಕ ನೀಡಲಾದ ನೀರಾವರಿ ಪಂಪು ಸೆಟ್ಟುಗಳ ಸಂಖ್ಯೆ | ಸರ್ವೀಸ್ ಮೇನ್ ಮುಖಾಂತರ ವಿದ್ಯುತ್ ಸಂಪರ್ಕ ನೀಡಲಾದ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ | ಮೂಲಭೂತ ಸೌಲಭ್ಯ/ಸರ್ವೀಸ್ ಮೇನ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿರುವ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ |
|---|---|---|---|---|---|---|---|
| 1 | ಬೆ.ವಿ.ಕಂ. | 142442 | 130136 | 12306 | 91017 | 7287 | 31832 |
| 2 | ಸೆಸ್ಕ್ | 92747 | 92595 | 152 | 57351 | 5367 | 29877 |
| 3 | ಮೆಸ್ಕಾಂ | 99932 | 79682 | 18630 | 22455 | 49354 | 7873 |
| 4 | ಹೆಸ್ಕಾಂ | 171367 | 136796 | 34571 | 88707 | 35469 | 24541 |
| 5 | ಜೆಸ್ಕಾಂ | 31299 | 20849 | 10450 | 8047 | 5323 | 7479 |
| ಒಟ್ಟು | | **537787** | **460058** | **76109** | **267577** | **102800** | **101602** |